M.Pharm GoK - 15 Seats
22/9/25

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2025-26ನೇ ಶೈಕ್ಷಣಿಕ ಸಾಲಿನಿಂದ ಡಿಕೆಎಸ್ ಚಾರಿಟಬಲ್ ಇನ್ಸ್ಟಿಟ್ಯೂಟ್ ಇವರ ಮೆ|| ಐಕಾನ್ ಫಾರ್ಮಸಿ ಕಾಲೇಜ್, ಬಿಡದಿ, ರಾಮನಗರ ಜಿಲ್ಲೆ ಇವರಿಗೆ ಎಂ.ಫಾರ್ಮ Pharmaceutics ವಿಭಾಗದ ಪ್ರವೇಶಮಿತಿಯನ್ನು 06 ರಿಂದ 15 ಸೀಟುಗಳಿಗೆ ಹೆಚ್ಚಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ:
1. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಇವರ ಪತ್ರ ಸಂಖ್ಯೆ: ACA/AFF/F/PH-96/2024-25, ದಿನಾಂಕ: 16.01.2024.
2. ಸರ್ಕಾರದ ಆದೇಶ ಸಂಖ್ಯೆ: ಆಕುಕ 94 ಪಿಟಿಡಿ 2024, ದಿನಾಂಕ:31.08.2024.
3. ಆಯುಕ್ತರು, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇವರ ಏಕ ಕಡತ ಸಂಖ್ಯೆ:ಆಔಆ/95/ಯೋಜನೆ/2025(ಇ.ಆ).
4. ಉನ್ನತಾಧಿಕಾರಿ ಸಮಿತಿ ಸಭೆಯ ನಡವಳಿ ದಿನಾಂಕ: 16.08.2025.

****

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರ.ಸಂ.(1)ರ ಪತ್ರದಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಡಿಕೆಎಸ್ ಚಾರಿಟಬಲ್ ಇನ್ಸ್ಟಿಟ್ಯೂಟ್ ಇವರ ಮೆ|| ಐಕಾನ್ ಫಾರ್ಮಸಿ ಕಾಲೇಜ್, ಬಿಡದಿ, ರಾಮನಗರ ಇವರಿಗೆ ಫಾರ್ಮ ಡಿ ಕೋರ್ಸ್‌ನ್ನು 30 ಸೀಟುಗಳ ಮಿತಿಯಲ್ಲಿ ಹಾಗೂ Pharmaceutics ವಿಭಾಗದಲ್ಲಿ 15ರ ಪ್ರವೇಶ ಮಿತಿಯೊಂದಿಗೆ ಎಂ.ಫಾರ್ಮ ಕೋರ್ಸ್‌ನ್ನು ಪ್ರಾರಂಭಿಸಲು RGUHS ರವರು Affiliation ನೀಡಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ.(2)ರ ಸರ್ಕಾರದ ಆದೇಶದಲ್ಲಿ ಡಿಕೆಎಸ್ ಚಾರಿಟಬಲ್ ಇನ್ಸ್ಟಿಟ್ಯೂಟ್ ಇವರ ಐಕಾನ್ ಫಾರ್ಮಸಿ ಕಾಲೇಜ್, ಬಿಡದಿ, ರಾಮನಗರ ಇವರಿಗೆ 30 ಸೀಟುಗಳ ಪ್ರವೇಶ ಮಿತಿಯಲ್ಲಿ ಹೊಸದಾಗಿ ಫಾರ್ಮ-ಡಿ ಕೋರ್ಸ್ ಪ್ರಾರಂಭಿಸಲು ಹಾಗೂ 06 ಸೀಟುಗಳ ಪ್ರವೇಶ ಮಿತಿಯಲ್ಲಿ ಎಂ-ಫಾರ್ಮ (ಫಾರ್ಮಸ್ಯುಟಿಕ್ಸ್) ಕೋರ್ಸ್‌ನ್ನು ಪ್ರಾರಂಭಿಸಲು ನಿರಾಕ್ಷೇಪಣಾ ಪತ್ರ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ.(3)ರ ಏಕ ಕಡತದಲ್ಲಿ ಆಯುಕ್ತರು, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇವರು ಡಿಕೆಎಸ್ ಚಾರಿಟಬಲ್ ಇನ್ಸ್ಟಿಟ್ಯೂಟ್ ಇವರ ಮೆ|| ಐಕಾನ್ ಫಾರ್ಮಸಿ ಕಾಲೇಜ್, ಬಿಡದಿ, ರಾಮನಗರ ವಿದ್ಯಾಸಂಸ್ಥೆಯವರು ಎಂ.ಫಾರ್ಮ ಕೋರ್ಸಿನ ಮಿತಿಯನ್ನು 06 ರಿಂದ 15 ಕ್ಕೆ ಹೆಚ್ಚಿಸಲು ಮೂಲಭೂತ ಸೌಕರ್ಯಗಳನ್ನು ಹೊಂದಿದ್ದು, 2024-25ನೇ ಶೈಕ್ಷಣಿಕ ಸಾಲು ಮುಕ್ತಾಯಗೊಂಡಿರುವುದರಿಂದ 2025-26ನೇ ಶೈಕ್ಷಣಿಕ ಸಾಲಿಗೆ ಎಂ.ಫಾರ್ಮ (ಫಾರ್ಮಸ್ಯೂಟಿಕ್ಸ್) ಪ್ರವೇಶ ಮಿತಿಯನ್ನು 06 ರಿಂದ 15 ಸೀಟುಗಳಿಗೆ ಹೆಚ್ಚಿಸಲು ಸಲ್ಲಿಸಿರುವ ಅರ್ಜಿಯನ್ನು ಪರಿಗಣಿಸಬಹುದಾಗಿದೆ ಎಂದು ವರದಿ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ.(4)ರಲ್ಲಿ 2025-26ನೇ ಸಾಲಿಗೆ 2025-26 ನೇ ಸಾಲಿಗೆ ಡಿಕೆಎಸ್ ಚಾರಿಟಬಲ್ ಇನ್ಸ್ಟಿಟ್ಯೂಟ್ ಇವರ ಮೆ|| ಐಕಾನ್ ಫಾರ್ಮಸಿ ಕಾಲೇಜ್, ಬಿಡದಿ, ರಾಮನಗರ ಜಿಲ್ಲೆ ಇವರಿಗೆ ಎಂ.ಫಾರ್ಮ Pharmaceutics ವಿಭಾಗದ ಪ್ರವೇಶಮಿತಿಯನ್ನು 06 ರಿಂದ 15 ಸೀಟುಗಳಿಗೆ ಹೆಚ್ಚಿಸಲು ಅನುಮತಿ ನೀಡುವ ಕುರಿತು ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

RGUHS ವರದಿ, ಆಯುಕ್ತರು, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇವರ ವರದಿ ಹಾಗೂ ಲಭ್ಯವಿರುವ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು , ಈ ಕೆಳಕಂಡಂತೆ ಆದೇಶ.

AKK 94 PTP 2024

**ಸರ್ಕಾರದ ಆದೇಶ ಸಂಖ್ಯೆ:ಆಕುಕ 94 ಪಿಟಿಡಿ 2024,**
**ಬೆಂಗಳೂರು. ದಿನಾಂಕ:22.09.2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2025-26 ನೇ ಶೈಕ್ಷಣಿಕ ಸಾಲಿನಲ್ಲಿ ಡಿಕೆಎಸ್ ಚಾರಿಟಬಲ್ ಇನ್ಸ್ಟಿಟ್ಯೂಟ್ ಇವರ ಮೆ|| ಐಕಾನ್ ಫಾರ್ಮಸಿ ಕಾಲೇಜ್,

IKON PHARMACY COLLEGE
No 32, Bheemanahalli, B M Road,
Bidadi Hobli, Ramanagar Tq. & Dist.
Pin - 562109

24/9/25

Scanned with OKEN Scanner

ನಂ.32, ಭೀಮನಹಳ್ಳಿ, ಬೆಂಗಳೂರು-ಮೈಸೂರು ರಸ್ತೆ, ಬಿಡದಿ ಹೋಬಳಿ, ರಾಮನಗರ-562109 ಇವರಿಗೆ ಎಂ.ಫಾರ್ಮ್ Pharmaceutics ವಿಭಾಗದ ಪ್ರವೇಶಮಿತಿಯನ್ನು 06 ರಿಂದ 15 ಸೀಟುಗಳಿಗೆ ಹೆಚ್ಚಿಸಲು ಅನುಮತಿ ನೀಡಿ ಆದೇಶಿಸಿದೆ.

**<u>ಸದರಿ ಸಂಸ್ಥೆಯು ಈ ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು:-</u>**

1. ಎಂ-ಫಾರ್ಮ್ ಕೋರ್ಸ್ ನ್ನು ಪ್ರಾರಂಭಿಸುವ ಮುನ್ನ ಅಗತ್ಯವಿರುವ ಎಲ್ಲಾ ಮೂಲ. ಸೌಲಭ್ಯಗಳು ಹಾಗೂ ಸಿಬ್ಬಂದಿಯನ್ನು ಹೊಂದಿರತಕ್ಕದ್ದು.
2. ಸರ್ಕಾರದ ಸೀಟುಗಳ ಹಂಚಿಕೆಯಲ್ಲಿ ಪ್ರವೇಶಾವಕಾಶಕ್ಕೆ ಹಾಲಿ ಜಾರಿಯಲ್ಲಿರುವ ನಿಯಮ/ಆದೇಶಗಳಿಗೆ ಸಂಸ್ಥೆಯು ಬದ್ಧವಾಗಿರಬೇಕು ಮತ್ತು ಸರ್ಕಾರಿ ಕೋಟಾ ಸೀಟುಗಳನ್ನು ಬಿಟ್ಟು ಕೊಡತಕ್ಕದ್ದು.
3. RGUHS ಮತ್ತು PCI ನಿಗದಿಪಡಿಸಿರುವ ಪರಿನಿಯಮಾವಳಿಗಳನ್ನು ಕಡ್ಡಾಯವಾಗಿಪಾಲಿಸತಕ್ಕದ್ದು.
4. ರಾಜ್ಯ/ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಪಾಲಿಸತಕ್ಕದ್ದು.
5. ಈ ಕಾಲೇಜಿಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಇದು ಶಾಶ್ವತ ಅನುದಾನರಹಿತ ಷರತ್ತಿಗೆ ಒಳಪಟ್ಟಿರುತ್ತದೆ.
6. ಸರ್ಕಾರ/ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ. ಯಾವುದೇ ಕಾರಣಕ್ಕೂ ಕಾಲೇಜಿನ ಹೆಸರು ಮತ್ತು ವಿಳಾಸವನ್ನು ಬದಲಾಯಿಸುವಂತಿಲ್ಲ.
7. ಸರ್ಕಾರವು ಕಾಲಕಾಲಕ್ಕೆ, ನಿಗದಿಪಡಿಸುವ ಕೋರ್ಸ್‌ನ ಶುಲ್ಕಗಳನ್ನು ಮಾತ್ರ ವಿದ್ಯಾರ್ಥಿಗಳಿಂದ ಪಡೆಯತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರದಿಂದ ಮಂಜೂರಾದ ಸೀಟುಗಳಲ್ಲಿ ಕಾಲಕಾಲಕ್ಕೆ, ಸರ್ಕಾರವು ನಿಗದಿಪಡಿಸುವ ಅನುಪಾತದಲ್ಲಿ ಸರ್ಕಾರಕ್ಕೆ ಸೀಟುಗಳನ್ನು ಬಿಟ್ಟುಕೊಡತಕ್ಕದ್ದು.
8. ಸಂಸ್ಥೆಯ ಆರ್ಥಿಕ ಸ್ಥಿತಿಯನ್ನು ಆಯುಕ್ತರು, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ, ಇವರು ಖಚಿತಪಡಿಸಿಕೊಳ್ಳುವುದು.
9. ಸರ್ಕಾರ ವಿಧಿಸಿರುವ ಮೇಲ್ಕಂಡ ಯಾವುದೇ ಒಂದು ಷರತ್ತನ್ನು ಉಲ್ಲಂಘಿಸಿದಲ್ಲಿ ಸಂಯೋಜನೆ/ಮಂಜೂರಾತಿಯನ್ನು ಹಿಂತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶ್ರೀಪತಿ ಪಿ.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾವೈಪ ಮತ್ತು ಸಮನ್ವಯ)

IKON PHARMACY COLLEGE
No 32, Bheemanahalli, B M Road,
Bidadi Hobli, Ramanagar Tq. & Dist.
Pin - 562109

**<u>ಇವರಿಗೆ:-</u>**

1. ಆಯುಕ್ತರು, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ, ಅರಮನ ರಸ್ತೆ, ಬೆಂಗಳೂರು.
2. ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ ಬ್ಲಾಕ್, ಜಯನಗರ, ಬೆಂಗಳೂರು-41.
3. ಪ್ರಾಂಶುಪಾಲರು, ಸರ್ಕಾರಿ ವಿಜ್ಞಾನ ಔಷಧ ಮಹಾವಿದ್ಯಾಲಯ, ಪಿ.ಕಾಳಿಂಗ್ ರಾವ್ ರಸ್ತೆ, ಬೆಂಗಳೂರು.

Scanned with OKEN Scanner

4. ಪ್ರಾಂಶುಪಾಲರು, ಮೆ|| ಐಕಾನ್ ಫಾರ್ಮಸಿ ಕಾಲೇಜ್, ನಂ.32, ಭೀಮನಹಳ್ಳಿ, ಬಿಡದಿ ಹೋಬಳಿ, ರಾಮನಗರ-562109
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

<u>ಪ್ರತಿ</u> <u>ಮಾಹಿತಿಗಾಗಿ:-</u>

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರಿಗೆ, ವಿಕಾಸ ಸೌಧ, ಬೆಂಗಳೂರು.

IKON PHARMACY COLLEGE
No 32, Bheemanahalli, B M Road,
Bidadi Hobli, Ramanagar Tq. & Dist.
Pin - 562109

Scanned with OKEN Scanner